ಪ್ರೀತಿಸಿದ್ದ ರೇಣುಕಳನ್ನು ನೆನೆಸಿಕೊಂಡು ಹೆಂಡತಿ-ಗೆಳತಿಯರೊಟ್ಟಿಗೆ ದೈಹಿಕವಾಗಿ ಸುಖಿಸುವ ರಾಜೀವನ ದ್ವಂದ್ವ ಇಲ್ಲಿನ ಎಲ್ಲ ಪಾತ್ರಗಳದ್ದೂ ಹೌದು. ಅವು ಸದ್ಯದ ಬದುಕಿನ ಒತ್ತಡ ಹೆಚ್ಚಾದಾಗಲೆಲ್ಲ ಭೂತಕಾಲಕ್ಕೆ ಜಾರುತ್ತಾರೆ. ಅಲ್ಲಿನ ನೆನಪುಗಳಿಂದ ಮತ್ತೆ ರಿಚಾರ್ಜ್ ಮಾಡಿಕೊಂಡವರ ಹಾಗೆ ಮತ್ತೆ ವಾಸ್ತವದ ಬದುಕಿಗೆ ಮರಳುತ್ತಾರೆ.

ಇಲ್ಲಿನ ಎಲ್ಲ ಪಾತ್ರಗಳೂ ತಮಗೇ ಗೊತ್ತಿಲ್ಲದೆ ಬದುಕಿನ ಅಥವಾ ವಿಧಿಯ ಒಳಸುಳಿಯೊಳಗೆ ಸಿಲುಕಿ ನರಳುತ್ತಿರುವವರು. ಆ ವಿಧಿ ವಿಧಿತದಲ್ಲಿ ಸ್ವತಃ ಇವರ ಪಾಲೆಷ್ಟು, ಅನ್ಯರ ಪಾಲೆಷ್ಟು, ನಾಗರಿಕ ಸಮಾಜದ-ಅದರ ಸಂರಚನೆಯಲ್ಲಿಯೇ ಇರುವ ಸುಕೃತಿ ವಿಕೃತಿಗಳ ಪಾಲೆಷ್ಟು ಎಂದು ಗುರ್ತಿಸಲಾಗದಷ್ಟು ಸಂಕೀರ್ಣವಾಗಿದೆ. ತುಸುವೇ ಆಚೆ ಸರಿದಿದ್ದರೂ ಎಲ್ಲವೂ ಬದಲಾಗಬಹುದಿತ್ತಲ್ಲ ಎಂಬ ಆಯ್ಕೆಯ ದಾರಿಗಳು ಎಲ್ಲರ ಬದುಕಿನಲ್ಲಿಯೂ ಇವೆ. ಆದರೆ, ಅಂಥದ್ದೊಂದು ಆಯ್ಕೆ ಹೆಜ್ಜೆಯಿಡುವ ಗಳಿಗೆಯಲ್ಲಿ ನಿಜವಾಗಲು ಇರುತ್ತವೆಯಾ ಎಂಬ ಅನುಮಾನವೂ ಇದೆ. ತಮ್ಮದಲ್ಲದ ತಪ್ಪಿಗೆ ಒಡಲೊಳಗೆ ಕೆಂಡವಿಟ್ಟುಕೊಂಡು ಬೇಯುತ್ತಿರುವ ಈ ಪಾತ್ರಗಳು ಎಂಥ ದುರ್ಬರ ಪ್ರಸಂಗದಲ್ಲಿಯೂ ಬದುಕಿಗೆ, ಬದುಕು ಎಸೆಯುವ ಸವಾಲುಗಳಿಗೆ ವಿಮುಖರಾಗುವುದಿಲ್ಲ ಎಂಬುದು ಬಹಳ ಮುಖ್ಯವಾದ ಸಂಗತಿ.

ಈ ಕಾದಂಬರಿಯ ಮುಖ್ಯಪಾತ್ರವಾದ ಸುಮನಳನ್ನ ಗಮನಿಸಬಹುದು. ದೈಹಿಕ ಕಾಮನೆ ಅವಳ ಬದುಕಿನ ಒಂದೊಂದು ಗಳಿಗೆಯನ್ನೂ ಒರಲೆಯ ಹಾಗೆ ಒಳಗೊಳಗೇ ತಿಂದು ಶಿಥಿಲಗೊಳಿಸುತ್ತಿದೆ. ಪಾರ್ಕಿನಲ್ಲಿ ಕಾಣಿಸುವ ಭಿಕಾರಿಯನ್ನೂ ಕಾಮಿಸುವಷ್ಟು ಕಾಮ ಅವಳನ್ನು ದಹಿಸುತ್ತಿದೆ. ಆದರೆ, ಅದರ ಶಮನಕ್ಕಾಗಿ ಅವಳು 'ಯಾವುದಾದರೊಂದು' ಗಂಡಿನ ಮೊರೆ ಹೋಗಲಾರಳು. ಅವಳ ಸಂಗಕ್ಕಾಗಿ ಹಾತೊರೆಯುತ್ತಿರುವ, ಅವಳು ಒಪ್ಪಿದರೆ ತಲೆಮೇಲೆ ಹೊತ್ತು ಮೆರೆಸಬಲ್ಲ ಅವಳ ಬಾಸ್ ಅರವಿಂದ್‌ಗೆ 'ಮೈ ಫುಟ್' ಎಂದು ಹೊರಬರಬಲ್ಲ ಅವಳ ಮನಸ್ಸು-ದೇಹಗಳಿಗೆ ಒದಗಿಬರುವುದು ರಾಜೀವ. ಆದರೆ, ಆ ರಾಜೀವನ ಭಾವಸಂಬಂಧ ಇವಳ ತಾಯಿಯ ಜೊತೆಗಿದೆ. ಇಂಥದ್ದೇ ಒಂದು ವಿಚಿತ್ರವೂ ಸಂಕೀರ್ಣವೂ ಆದ ಪರಿಸ್ಥಿತಿಯೇ ಅವಳ ಹಳೆಯ ಪ್ರಿಯಕರ ರತ್ನಾಕರನನ್ನು ಅವಳಿಂದ ಬೇರ್ಪಡಿಸಿದೆ. ಅದು ರತ್ನಾಕರನ ತಂದೆ, ಸುಮನಾಳ ತಾಯಿ ಜೊತೆಗೆ ಹೊಂದಿದ ಬಲವಂತದ ದೇಹಸಂಬಂಧದಿಂದ ಹುಟ್ಟಿದ್ದು.

ಈ ದೇಹ ಸಂಬಂಧ ಮತ್ತು ಭಾವಸಂಬಂಧಗಳನ್ನು ಈ ಕಾದಂಬರಿ ಹಲವು ನೆಲೆಗಳಲ್ಲಿ ಶೋಧಿಸುತ್ತದೆ; ಪರೀಕ್ಷಿಸುತ್ತದೆ. ಮತ್ತು ಅವುಗಳ ಅತ್ಯಂತ ಸಂಕೀರ್ಣವಾದ ಸಿಕ್ಕುಗಳನ್ನು ನಮ್ಮೆದುರಿಗೆ ಬಿಚ್ಚಿಟ್ಟು, ಇವೆಲ್ಲದಕ್ಕೂ ಏನು ಅರ್ಥ? ಯಾವುದು ವ್ಯರ್ಥ? ಯಾವುದು ಸಾರ್ಥಕ? ಈ ಸಿಕ್ಕನ್ನು ಬಿಡಿಸುವ ಉಪಾಯವೇ ಇಲ್ಲವೇ? ಎಂಬ ಪ್ರಶ್ನೆಗಳನ್ನು ಮನಸಲ್ಲಿ ಎಬ್ಬಿಸಿಯೇ ಕೊನೆಗೊಳ್ಳುತ್ತದೆ.

ಮೊದಲೇ ಹೇಳಿದಂತೆ ಭೂತಕಾಲದ ನೆನಪು ಮತ್ತು ವರ್ತಮಾನದ ಬದುಕು ಈ ಎರಡರ ಹೆಣಿಗೆಯಲ್ಲಿಯೇ ಈ ಕಾದಂಬರಿ ತೆರೆದುಕೊಳ್ಳುತ್ತ ಹೋಗುತ್ತದೆ. ಭೂತಕಾಲದ ಬದುಕಿನ ನೆನಪಿನ ದಾರಿಯಲ್ಲಿ ನಡೆಯುವುದು ಬರೀ ಇಲ್ಲಿನ ಪಾತ್ರಗಳಿಗಷ್ಟೇ ಅಲ್ಲ, ಕಾದಂಬರಿಕಾರರಿಗೂ ಸಲೀಸು. ಹಾಗಾಗಿ ಆ ಭಾಗದಲ್ಲಿ ಕಥನ ಜೀವಂತಿಕೆಯಿಂದ ನಳನಳಿಸುತ್ತದೆ. ತುಂಬಿದ ನದಿಯ ಹಾಗೆ ಎರಡೂ ದಡಗಳನ್ನು ಬಾಚಿಕೊಂಡು ಮೈದುಂಬಿ ಹರಿಯುತ್ತದೆ. ಅಲ್ಲಿ ಅದು ಸಂದುಗೊಂದಿನಲ್ಲಿ, ಕಲ್ಲುಕೊಲ್ಲಿಗಳಲ್ಲಿ ತಗ್ಗಿನ ದಾರಿ ಹುಡುಕಿಕೊಂಡು ಹರಿಯುವ ಜರಿಯಲ್ಲ; ತನ್ನ ನಡಿಗೆಯನ್ನೇ ದಾರಿಯಾಗಿಸಿಕೊಂಡು ಭೋರ್ಗರೆಯುತ್ತ ಹರಿಯುವ ಮಳೆಗಾಲದ ನದಿ. ಅದರಲ್ಲಿಯೂ ಸುಮನಳ ಬಾಲ್ಯದ ಭಾಗಗಳನ್ನು ಹೇಳುವ 'ನೆನಪು ನಾಲ್ಕು' ಎಂಬ ಅಧ್ಯಾಯವಂತೂ ಈ ಕಾದಂಬರಿಯ ಅತ್ಯುತ್ತಮ ಭಾಗ ಅಷ್ಟೇ ಅಲ್ಲ, ಕಾದಂಬರಿಕಾರರ ಗದ್ಯಶಕ್ತಿಯನ್ನು ಎತ್ತರವನ್ನು ತೋರಿಸುವ ಭಾಗವೂ ಹೌದು. ಅದೇ ವರ್ತಮಾನದ ಬದುಕಿಗೆ ಬಂದರೆ ಆ ನದಿ ಸೊರಗುತ್ತದೆ. ಕೆಲವೆಡೆ ಅಲ್ಲಲ್ಲೇ ಸುತ್ತು ಹೊಡೆಯುತ್ತ ನಿಲ್ಲುತ್ತದೆ. ಗುಂಡಿಯಾಗಿ ಕೊಳೆಗಟ್ಟುತ್ತದೆ. ಮತ್ತೆ ಕೆಲವೆಡೆ ಕಲ್ಲುಗಳೇ ಹೆಚ್ಚಾಗಿ ನೀರು ತೆಳುವಾಗಿ ತೆವಳುತ್ತದೆ.

ಪದ್ಯಗಳು ಈ ಕಾದಂಬರಿಯುದ್ದಕ್ಕೂ ಅಲ್ಲಲ್ಲಿ ಬಳಕೆಯಾಗಿವೆ. ಮೊದಲಿನ ಭಾಗದಲ್ಲಿ ಭಿಕಾರಿಯ